ಹಾರ್ದಿಕ್ ವಿದ್ಯಾವಂತ ಯುವಕ. ಜೊತೆಗೆ ಸ್ವಲ್ಪ ಶೋಕಿವಾಲ. ಒಂದೊಮ್ಮೆ ಮಂತ್ರಿ ಮಾಲ್‌ನಲ್ಲಿ ಭೇಟಿಯಾಗಿದ್ದ ಶಿಲ್ಪಾಳ ಜೊತೆಗೆ ಅವನೇ ಮಾತು ಆರಂಭಿಸಿ ರಸ್ತೆಯ ಉದ್ದ ಅಗಲಗಳನ್ನು ಪರಿಚಯಿಸಿದ್ದ. ಶಿಲ್ಪಾಳಿಗೂ ಅಂತಹ ಮಹಾನಗರದಲ್ಲಿ ಒಂದು ಆಸರೆ ಬೇಕಾಗಿತ್ತು. ಅನುಚಿತವಾಗಿ ದೊರಕಿದ್ದೇ ಅವಳು ಹೊಂದಿಕೊಳ್ಳಲೇಬೇಕಾಯಿತು. ಹಾಗಂತ ಅವಳಿಗೆ ಆಕಾಂಕ್ಷೆಗಳಿಲ್ಲವೆಂದಲ್ಲ. ಹಾರ್ದಿಕ್ ಬ್ಯಾಚುಲರ್. ಹೊಂದಿಕೊಳ್ಳುವ ಉತ್ಸುಕತೆ, ಕುತೂಹಲಕ್ಕೆ ಅವಳು ಕೇಳಿದ್ದನ್ನೆಲ್ಲಾ ತಂದು ಸುರಿಯುತ್ತಿದ್ದ. ಅವಳ ಬಹುದಿನಗಳ ಕನಸಿದ್ದದ್ದು ಅವಳಷ್ಟೇ ಎತ್ತರದ ಟೆಡ್ಡಿಬೇರ್. ಅದನ್ನೂ ತಂದು ಕೊಟ್ಟಾಗ ಅವಳಿಗಾದ ಸಂತಸ ವರ್ಣನಾತೀತ. ಸದಾ ಅವಳು ಮಲಗುವಾಗ ಅದನ್ನು ಎದೆಗೆ ಅವಚಿ ಹಿಡಿದುಕೊಂಡೇ ಮಲಗುವುದು ರೂಢಿ.

ಕಾಲಕ್ರಮೇಣ ಬದಲಾವಣೆಗಳಾಗತೊಡಗಿತು ಇಬ್ಬರ ನಡುವೆಯು. ನಾನು–ನೀನು ಎನ್ನುವ ಭೇದವಿಲ್ಲದೆ ಮನೆಯ ಕೆಲಸಗಳನ್ನು ತಾವುಗಳೇ ಮಾಡಿ ಮುಗಿಸುತ್ತಿದ್ದುದು ಹಳೆಯ ಮಾತು. ಇತ್ತೀಚೆಗೆ ಶಿಲ್ಪಾಳಿಗೆ ಹೆಚ್ಚಾಗಿ ನೈಟ್ ಡ್ಯೂಟಿ ಬಿದ್ದಾಗ ಹಾರ್ದಿಕ್ ಬದಲಾದ. ಬೆಳಗಿನ ಕೆಲಸ ನಿನ್ನದು, ರಾತ್ರಿ ನನ್ನದು ಅಥವಾ ಅದಲು ಬದಲು ರೀತಿಯ ಹಂಚಿಕೆ ಶುರುವಾದಾಗ ಮೊದಲ ಖುಷಿ ಈಗಿಲ್ಲ ಅನಿಸಿತು ಇಬ್ಬರಿಗೂ.

ಬೆಳಗ್ಗೆ ಏಳುವಾಗಲೇ ಒಂದು ರೀತಿಯ ಆಲಸ್ಯ. ಸ್ವಲ್ಪ ಹೊತ್ತು ಜಗಳ. ಜಗಳ ತಾರಕಕ್ಕೇರಿ ಕೈ ಹ್ಯೊ ಅನ್ನುವ ಪರಿಸ್ಥಿತಿ ಎದುರಾಯಿತು. ವಾರಾಂತ್ಯದ ದಿನಗಳು ಮೋಜಿನಿಂದ ಕಳೆಯುತ್ತಿದ್ದುದು ಈಗ ಮನೆಯಲ್ಲಿಯೇ ಕೆಲಸಗಳಲ್ಲೇ ಮುಳುಗಿ ಏನೂ ತೋಚದ ಸ್ಥಿತಿ ಶಿಲ್ಪಾಗೆ. ಅಲ್ಲಿಂದ ಹೊರಟು ಹೋಗೋಣವೆಂದರೆ ಹಾರ್ದಿಕ್ ಯಾವುದಕ್ಕೂ ಕೊರತೆ ತಂದವನಲ್ಲ. ಸುಖದ ಸುಪ್ಪತ್ತಿಗೆಯಲ್ಲಿ ಮುಳುಗಿಸಿ ಬಿಡುವವ. ನಯಾಪೈಸೆ ಖರ್ಚು ಮಾಡಿಸಲಾರ. ಸರ್ವ ಜವಾಬ್ದಾರಿಯೂ ಅವನದ್ದೆ. ಅಲ್ಲಿಂದ ಹೊರಗೆ ಬಂದರೆ... ಮುಂದೇನು ಗತಿ? ಅವಳು ಹೊಂದಿಕೊಂಡಳು ಅವನ ದೌರ್ಜನ್ಯವನ್ನು ಎದುರಿಸುತ್ತಾ. ಅವನದ್ದು ತೀರಾ ಅತಿರೇಕವೆಂದಾಗ ವಾರಾಂತ್ಯಕ್ಕೆ ಮಗಳನ್ನು ನೋಡುವ ನೆಪ ಹೂಡಿ ರಾತ್ರಿಯ ಬಸ್ಸಿಗೆ ಹೊರಟು ಬಿಡುತ್ತಾಳೆ. ಹಾಗೆ ಅವನ ವಿರುದ್ಧವಾಗಿ ಹೋದ ಮೇಲೆ ಅವಳು ಹಿಂತಿರುಗುವಾಗ ಮನೆಯ ಬಾಗಿಲು ತೆರೆಯದೆ ಹೊರಗೆ ನಿಲ್ಲಿಸಿ ಅರ್ಧ ಸಿಎಲ್ ತೆಗೆಯುವಂತೆ ಮಾಡಿ ಸತಾಯಿಸುತ್ತಿದ್ದ.

ಇದೆಲ್ಲವನ್ನೂ ಸಹಿಸಿಕೊಂಡು ಅಧಿಕಾರಿಯ ಮುಂದೆ ಹಲ್ಲು ಗಿಂಜುತ್ತಾ 'ತಪ್ಪನ್ನು ಮನ್ನಿಸು ಪ್ರಭುವೆ' ಎನ್ನುವಂತೆ ನಿಲ್ಲಬೇಕಾದ ಪರಿಸ್ಥಿತಿ. ಇಂತಹ ಪರಿಸ್ಥಿತಿಯಲ್ಲಿ ಬಿಸಿಲು ಮಳೆಗೆ ರಕ್ಷಣೆ ಕೊಡುವಂತೆ ಕೊಡೆ ಹಿಡಿದವನು ಚಿರಂತನ್. ಅವನ ಬದುಕಿನಲ್ಲಿ ಒಂದು ಬಿಂದುವಿನಂತೆ ಗೋಚರಿಸಿ ಅವಳನ್ನು ಪುಸ್ತಕ ಮಳಿಗೆಯೊಂದರಲ್ಲಿ ಭೇಟಿಯಾದ. 'ನೀವು ಆ ದಿನ ಬಸ್ಸು ನಡು ರಸ್ತೆಯಲ್ಲಿ ಕೆಟ್ಟು ನಿಂತಾಗ ರಿಪೇರಿ ಮಾಡಿದ್ರಲ್ಲ?' ನೆರಳು ಚೆನ್ನಾಗಿ ಬಿದ್ದಿತ್ತು. ಅವಳ ಕಣ್ಣುಗಳಲ್ಲೂ ಅದೆಂತದೋ ಒಂದು ಸೆಳೆತವಿತ್ತು.

* * *

ಆ ದಿನ 'ನೀನಾಸಂ'ನ ನಾಟಕ ನೋಡಲೇಬೇಕೆನ್ನುವ ಉದ್ದೇಶದಿಂದ ರಂಗಮಂದಿರಕ್ಕೆ ಹೊರಟ ಚಿರಂತನ್. ಶಿಲ್ಪಾಳಿಗೂ ಓದುವ ಹುಚ್ಚಿತ್ತು. ಜೊತೆಗೆ ನಾಟಕ ಸಿನಿಮಾ ನೋಡುವುದನ್ನೂ ತಪ್ಪಿಸುತ್ತಿರಲಿಲ್ಲ. ಚಿರಂತನ್ ನಾಟಕಕ್ಕೆ ಹೊರಡುವೆನೆಂದಾಗ ಬೆಳಗ್ಗೆನೆ ರಂಗಮಂದಿರದ ಹೊರಗಿನ ವಿಶಾಲವಾದ ಸುಬಾಬುಲ್ ಮರಗಳ ನೆರಳಿನಲ್ಲಿ ಕುಳಿತಿದ್ದಳು. ಹಕ್ಕಿಗಳ ಇಂಚರ, ಹಿತವಾಗಿ ಬೀಸುತ್ತಿದ್ದ ತಂಗಾಳಿ, ಸೂರ್ಯನ ಕಿರಣವಿನ್ನೂ ತೀಕ್ಷ್ಣವಾಗದ ಬೆಳಕು, ಗೆಳೆಯನ ನಿರೀಕ್ಷೆಯಲ್ಲಿ ಎಲ್ಲವೂ ಆಪ್ಯಾಯಮಾನವಾಗಿತ್ತು. ಚಿರಂತನ್ ಆಟೊ ಇಳಿಯುತ್ತಿದ್ದಂತೆಯೇ ನೆರಳ ದಂಡೆಯಲ್ಲಿ ಕುಳಿತಿದ್ದವಳು ಕಾಣಿಸಿದಳು. ಕೈ ಬೀಸಿ 'ವಿಶ್' ಮಾಡಿದ. ಅವಳು ಕೈಯೆತ್ತರಿಸಿ ಕರೆದಳು. ಅವಳ ಪಕ್ಕದಲ್ಲಿಯೇ ಕುಳಿತ. ಆ ದಿನದ ಪ್ರದರ್ಶನವಾಗುವ ನಾಟಕದ ದೊಡ್ಡ ಪೋಸ್ಟರ್ ಗೋಡೆಯ ಮೇಲೆ ರಾರಾಜಿಸುತ್ತಿತ್ತು. ನೀನಾಸಂನಲ್ಲಿ ಅವನೂ ಒಂದೆರಡು ತಿಂಗಳು ನಾಟಕ ಅಭ್ಯಾಸ ನಡೆಸಿದ್ದ. ಕೆಲವೊಂದು ಕಲಾವಿದರ ಪರಿಚಯವಿತ್ತು. ಹಾಗಾಗಿ ನಾಟಕವನ್ನು ನೋಡಲೇಬೇಕೆನ್ನುವ ಉದ್ದೇಶದಿಂದ ಅಲ್ಲಿಗೆ ಬಂದ.

ಶಿಲ್ಪಾಳ ಉದ್ದೇಶ ಬೇರೆಯಿತ್ತು. ಬಳ್ಳಿ ಒಂದು ಮರದ ಆಸರೆ ಸಿಗದಾಗ ಇನ್ನೊಂದು ಮರದ ಕಡೆಗೆ ಚಾಚುವುದು ಪ್ರಕೃತಿ ನಿಯಮ. ಹಾರ್ದಿಕ್‌ನಿಂದ ಬಿಡುಗಡೆಯಾಗಬೇಕಾದರೆ ಚಿರಂತನ್‌ನ ಆಸರೆ ಅಗತ್ಯವಾಗಿತ್ತು. ಆದರೆ ಚಿರಂತನ್ ಅವಳನ್ನು ಹೇಗೆ ಸ್ವೀಕರಿಸುವನೋ ಏನೋ ಎನ್ನುವ ಅಳುಕು ಅವಳಿಗೆ. ಬದುಕಿನಲ್ಲಿ ಬಹಳಷ್ಟು ಪೆಟ್ಟುಗಳನ್ನು ತಿಂದವಳಿಗೆ ಬದುಕು ಬಹು ದೊಡ್ಡ ಪಾಠ ಕಲಿಸಿದೆ. ಆದರೂ ಹೆಣ್ಣು ಹುಟ್ಟಿರುವುದೇ ಕಷ್ಟಗಳನ್ನು ಅನುಭವಿಸಲು ಎನ್ನುವ ನೊಂದವರ ಮಾತು ಅವಳಿಗೆ ಅನ್ವಯಿಸುವಂತೆ ಇತ್ತು. ಬಂದದ್ದನ್ನು ಬಂದಂತೆ ಸ್ವೀಕರಿಸುವುದು ಅವಳ ಗುಣವಾದರೂ ಕೆಲವೊಮ್ಮೆ ತೀರಾ ಅತಿರೇಕವೆನಿಸಿದರೆ ಸಿಡಿದು ನಿಲ್ಲುವುದಕ್ಕೂ ತಯಾರು.

ಸೀತಾರಾಮು ಅವಳನ್ನು ನಾಲ್ಕು ಗೋಡೆಯ ನಡುವೆ ಬಂಧಿಸಿ ಆತನ ಅಮ್ಮನ ಜೊತೆಗೆ ದಬ್ಬಾಳಿಕೆ ನಡೆಸಿದಾಗ ಎದ್ದು ಎದುರು ನಿಂತಿದ್ದಳು. ಒಂದು ಮಗುವಿನ ತಾಯಿಯಾದ ಮೇಲೂ ಆ ದಬ್ಬಾಳಿಕೆ ನಿಲ್ಲದಿದ್ದಾಗ ಅತ್ತೆ ಮನೆಯಿಂದ ಹೊರಗೆ ಬಂದು ತಾನು ಕಲಿತ ವಿದ್ಯೆಯ ಮೂಲಕ ಕೆಲಸ ಗಿಟ್ಟಿಸಿಕೊಂಡಿದ್ದಳು. ಮದುವೆಗೆ ಮುನ್ನ ಕೆಲಸ ಮಾಡಲು ಒಪ್ಪಿಕೊಂಡಿದ್ದ ಸೀತಾರಾಮು ಬರಬರುತ್ತಾ, 'ನಿನ್ನ ಡಿಪ್ಲೊಮಾಗೆ ಬೆಲೆಯಿಲ್ಲ. ಮನೆಯ ಕೆಲಸ ಮಾಡಿಕೊಂಡು ಬಿದ್ದಿರು' ಎನ್ನುವ ಕಟುವಾದ ಮಾತುಗಳನ್ನು ಆಡಿದ್ದ. ತಾನು ಕಲಿತದ್ದು ವ್ಯರ್ಥವೆನ್ನುವ ವ್ಯಥೆ ಕಾಡಲಾರಂಭಿಸಿತು. ಕೆಲಸವಿಲ್ಲದಿದ್ದರೂ ನೆಮ್ಮದಿಯ ಬದುಕು ಬಯಸಿದವಳಿಗೆ ಸಿಕ್ಕಿದ್ದೇ ಬೇರೆ. ಗಂಡನ ದೌರ್ಜನ್ಯ, ಅತ್ತೆಯ ಕಟು ಮಾತುಗಳು. ಇವೆಲ್ಲದರಿಂದಲೂ ಹೊರಗೆ ಬರಬೇಕಾದರೆ ಅವಳು ಕೆಲಸಕ್ಕೆ ಸೇರುವುದು ಅನಿವಾರ್ಯವಾಯಿತು. ಪರ್ಯಾವಸಾನ ಹಾರ್ದಿಕ್‌ನ ಜೊತೆಗೆ 'ಲಿವಿಂಗ್ ಟುಗೆದರ್' ಎನ್ನುವ ಬದುಕು ಆರಂಭಿಸಬೇಕಾಯಿತು. ಸೀತಾರಾಮನ ಕೈಯಲ್ಲಿ ರೆಡ್ ಹ್ಯಾಂಡಾಗಿ ಸಿಕ್ಕಿಬಿದ್ದ ಅವಳಿಗೆ ಗಂಡನಿಂದ ಡೈವೋರ್ಸ್. ಅವಳು ವಿಚಲಿತಳಾಗಲಿಲ್ಲ. ಮಗಳನ್ನು ತಾಯಿಗೊಪ್ಪಿಸಿ ಕೆಲಸ ಮುಂದುವರೆಸಿದಳು.

ಹಾರ್ದಿಕ್ ತುಂಬಾನೇ ಸ್ವಾರ್ಥಿಯಾಗಿ ಬಿಟ್ಟ. ಅವನು ಹೇಳಿದ ಹಾಗೆ ನಡೆದುಕೊಳ್ಳಬೇಕೆನ್ನುವ



ಅವನ ಧೋರಣೆಯನ್ನು ಮೆಟ್ಟಿ ನಿಲ್ಲಲೇಬೇಕಾಯಿತು. ಅವಳು ಇನ್ನು ತನಗೆ ಮಕ್ಕಳು ಬೇಡವೆಂದರೂ ಅವನ ದೌರ್ಜನ್ಯ ವಿಪರೀತವಾಯಿತು. ನಮ್ಮಿಬ್ಬರ ಜೊತೆಯಾದ ಬದುಕಿಗೆ ಒಂದು ಸಾಕ್ಷಿ ಬೇಕೇಬೇಕೆಂದು ಅವನು ಹಟ ಹಿಡಿದ. ನಿರಾಕರಿಸಿದಳು, ಹೊಡೆಸಿಕೊಂಡಳು, ಮನೆಯ ಬಾಗಿಲು ಮುಚ್ಚಿಸಿಕೊಂಡಳು.